RegaNo BG 155

Sri "SATYAVADI"
— DAILY —
MYSORE4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಸ್ಕೇದಾರ್ ಎ.ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

21—2—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ರಷ್ಯಾದಲ್ಲಿ ರಾಮಾಯಣ ವಾಚನ

ಮಾಸ್ಕೊ — ಇಲ್ಲಿನ ಸ್ನೇಹ ಸದನದಲ್ಲಿ ಭಾರತೀಯ ಕಾವ್ಯಕೃತಿಗಳ ಮೂಲ ಮತ್ತು ರಷ್ಯನ್ ಭಾಷಾನುವಾದಗಳನ್ನು ಸೋವಿಯತ್ ಕವಿಗಳು ಓದಿದರು : ಇವುಗಳಲ್ಲಿ ರಾಮಾಯಣ: ಮಹಾಭಾರತ ಕೃತಿಗಳೂ ಇದ್ದವು. ಗೋಕಿಯ ಒಂದು ಕವಿತೆಯ ಉರ್ದು ಅನುವಾದವನ್ನು ಜೋಯಾ ಅನ್ವಾರಿ ಪಠಿಸಿದರು ; ಭಾರತೀಯ ದೂತಾವಾಸದ ಪ್ರಥಮ ಕಾರ್ಯದರ್ಶಿ ಜೈಕರವರೂ ಸೂಕ್ತ ಭಾಷಣವನ್ನು ನೀಡಿದರು.

ನೀರಿನಮೇಲೆ ಹೋಗುವ ಕಾರು

ಶುಯಿಬಯ್ನೇವ್ — ಹೊಸ ಮಾದರಿಯ ಕಾರಿಗೆ ಜಲಪಟ್ಟಲವನ್ನು ಜೋಡಿಸುವುದರಿಂದ ಅದು ನೀರಿನ ಮೇಲೆಯೂ ಸಹ ಸಂಚರಿಸಬಲ್ಲುದು ; ಇದು ಗಂಟೆಗೆ 60 ಕಿಲೋಮೀಟರು ಹೋಗ ಬಲ್ಲದು.

ನೆಹರೂಗೆ ಗೋಮಟೇಶ್ವರ ವಿಗ್ರಹ

ಪ್ರಧಾನಿ ನೆಹರು ಬೆಳಗಾವಿಯಿಂದ ಮಂಗಳೂರಿಗೆ ಹೋಗುವಾಗ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಶ್ರೀ ಜಿನದತ್ತ ಕೊಲ್ಹಾರವರು ಗಾಜಿನಲ್ಲಿ ತಯಾರಿಸಿದ ಶ್ರೀ ಗೋಮಟೇಶ್ವರ ಪ್ರತಿಮೆಯನ್ನು ಅರ್ಪಿಸಿದರು : ಶ್ರೀ ನೆಹರೂರವರು ಸಂತೋಷದಿಂದ ಸ್ವೀಕರಿಸಿದರು.

ಭಯವಿಲ್ಲ

ರಷ್ಯದ ಅಣುಶಕ್ತಿಯಿಂದ ಅಮೆರಿಕ ಭಯಗೊಂಡಿಲ್ಲವೆಂದು ರಷ್ಯದ ರಕ್ಷಣಾ ಕಾರ್ಯದರ್ಶಿ ಮ್ಯಾಲ್ಕಿಮೂರ ಚಿಕಾಗೊನಲ್ಲಿ ನುಡಿದರು.

ಸ್ನೇಹ ಬೇಕು

ಉತ್ತರ ಅಮೆರಿಕಾವನ್ನು ಕುರಿತು ಶ್ರೀಮತಿ ನೀನಾ ಕ್ರುಶ್ಚೇವರು ಮಾಸ್ಕೊ ರೇಡಿಯೋದಲ್ಲಿ ಮಾತನಾಡಿ, ನಮಗೆ ನಿಮ್ಮೊಡನೆ ಯುದ್ಧ ಬೇಡ ಸ್ನೇಹ ಬೇಕು ಎಂದರು.

ಕೆನೆಡಿ ಆಜ್ಞೆ

ಅಮೆರಿಕದ ಮೇಲೆ ಆಕ್ರಮಣ ಸಹಸೇರಿ ರಾಷ್ಟ್ರೀಯ ಜರೂರು ಪರಿಸ್ಥಿತಿ ಎದುರಿಸಲು ಅಮೆರಿಕ ಸಿದ್ಧವಾಗಿಂಬೀ ಕೆಂದು ಅಧ್ಯಕ್ಷ ಕೆನೆಡಿ ಅಧಿಕಾರಿಗಳಿಗೆ ಆಜ್ಞೆ ಮಾಡಿಂಬರೆಂದು ವಾಷಿಂಗ್ಟನ್ ವಾರ್ತೆ.

ನಾಯಕರೊಡನೆ ಸಂಪರ್ಕ

ಜೀವಾವಧಿಯಲ್ಲಿ ನಡೆಯುವ ನಿಶ್ಶಸ್ತ್ರೀಕರಣ ಮಾತುಕತೆಗಳನ್ನು ಕುರಿತು ಈಜಿಪ್ಷಿನ ಗಣರಾಜ್ಯದ ಅಧ್ಯಕ್ಷರಾದ ನಾಸೆರ್‌ರು ಪ್ರಧಾನಿ ನೆಹರು ಹಾಗೂ ಯುಗಸ್ಲಾವಿಯಾ ಅಧ್ಯಕ್ಷ ಮಾ|| ಟೀಟೋರ ಸಂಗಡ ಸಂಪರ್ಕ ಹೊಂದಿರುವರು.

ಉತ್ತಮ ಶಿಕ್ಷಣ

ಬ್ರಿಟನ್ನಿನ ರಗ್ಬಿ ಸ್ಕೂಲಿನ ಮುಖ್ಯೋಪಾಧ್ಯಾಯರಾದ ಡಾ|| ವಾಲ್ಟರ್ ಹ್ಯಾವಿಲ್ಟನ್ನರು ಮಾಸ್ಕೋನಲ್ಲಿ ಹೇಳಿಕೆಯನ್ನಿತ್ತು, ರಷ್ಯದ ಶಿಕ್ಷಣ ಪದ್ಧತಿ ವಿಶ್ವದಲ್ಲೆಲ್ಲ ಉತ್ತಮವಾದುದೆಂದು ತಿಳಿಸಿದರು ಎಂದು ವಂದಿಯಾಗಿದೆ.

ಇದೇ ಮೊದಲು

ಚುನಾವಣೆಯ ಚರಿತ್ರೆಯಲ್ಲೇ ಪ್ರಪ ಥವವಾಗಿ ಪೇಜಾವರ ಸ್ವಾಮಿಗಳವರು ಮತದಾನ ಮಾಡಿದರೆಂದು ಮಂಗಳೂರಿನ ವಾರ್ತೆ ತಿಳಿಸುತ್ತದೆ.

ಆಸ್ಪತ್ರೆಗೆ ದಾಖಲು

ಅಲೆಪ್ಪಿಗೆ ಸುಮಾರು 20 ಮೈಲಿಗಳ ದೂರವಿರುವ ಹೊಟ್ಟೆಯಲ್ಲಿ ಆಹಾರ ವಿಷಮಿಶ್ರಣದಿಂದ ಅಸ್ವತ್ಥೆ ಸೇರಿರುವರು

ಓಟಿನ ಸುದ್ದಿ

ಅಳೋದಲ್ಲಿ ನಪುಂಸಕರು ಓಟು ಮಾಡಲು ಹೆಂಗಸರೊಡನೆ ಕ್ಯೂನಲ್ಲಿದ್ದರು ಅವರ ಹೆಸರು ಗಂಡಸರ ಪಟ್ಟಿಯಲ್ಲಿತ್ತು ಗಂಡಸರೊಡನೆ ನಿಂತು ಅವರು ಮತವಿತ್ತರು.

ಪತ್ರಿಕೆಗಳ ದಹನ

ಬೊಂಬಾಯಿನ ಪ್ರಮುಖ ವೃತ್ತ ಪತ್ರಿಕಾ ಕಛೇರಿಗೆ ಸುಮಾರು 6 ಸಾವಿರ ಕಾಂಗ್ರೆಸಿಗರು, ಅವರ ಬೆಂಬಲಿಗರು ವೆಂಬಣಿಗೆ ಹೋಗಿ ಸಂಸ್ಥೆಯಿಂದ ಪ್ರಕಟವಾಗುವ ಇಂಗ್ಲೀಷು ಮತ್ತು ಮರಾಠಿ ಪತ್ರಿಕೆಗಳ ಸುಮಾರು ಪ್ರತಿಗಳನ್ನು ಸುಟ್ಟರು ರಕ್ಷಣಾ ಮಂತ್ರಿ ಶ್ರೀ ವಿ. ಕೆ. ಕೃಷ್ಣಮೆನನ್ ವಿರುದ್ಧ ನಡೆಯುತ್ತಿರುವ ಪ್ರಚಾರ ಪ್ರತಿಭಟನೆಗಾಗಿ ಈ ಕೃತ್ಯ

ಚುನಾವಣೆ ವೀಕ್ಷಣೆ

ಮೈಸೂರು ಡಿವಿಜನ್ನಿನ ಪಬ್ಲಿಸಿಟಿ ಪತ್ರ ಇನ್‌ಫರ್ಮೇಷನ್ ಅಸಿಸ್ಟೆಂಟು ಡೈರೆಕ್ಟರ್‌ರವರು ಮೊನ್ನೆ ದಿನ ಚಾಮರಾಜ ನಗರ ಪಾರ್ಲಿಮೆಂಟರಿ ಕ್ಷೇತ್ರದ ಚುನಾವಣಾ ಸಂಬಂಧ ವಿಷಯಗಳನ್ನು ತಿಳಿದುಕೊಳ್ಳುವುದಕ್ಕಾಗಿ, ಮೈಸೂರು ಪತ್ರಿಕೋದ್ಯೋಗಿಗಳು ಅಲ್ಲಿಗೆ ಭೇಟಿ ಕೊಡಲು ಏರ್ಪಡಿಸಿದ್ದರ ಕೆಲವು ಕ್ಷೇತ್ರಗಳಿಗೂ ಭೇಟಿಯನ್ನು ಕೊಡಲಾಯಿತು ಚುನಾವಣೆ ವಿಷಯಕ್ಕೆ ಸಂಬಂಧಪಟ್ಟ ಸಮರ್ಪಕವಾಗಿತ್ತು. ಜನತೆಯಲ್ಲಿ ಮತದಾನದ ಬಗ್ಗೆ ಅಪೇಕ್ಷಿತ ಉತ್ಸಾಹ ಕಾಣಬರಲಿಲ್ಲವಾದರೂ, ಪಕ್ಷಗಳು ತಮ್ಮ ಕಡೆ ಹೆಚ್ಚು ಮತ ಬೊರೆಯುವಂತೆ ಪ್ರಚಾರ ಮತ್ತು ಪ್ರಯತ್ನ ನಡೆಯುತ್ತಿತ್ತು.

ಕಾಂಗ್ರೆಸ್ ರಾಜರು

ಕಾಂಗ್ರೆಸಿನಲ್ಲಿರುವ ಮಹಾರಾಜರು ಮತ್ತು ಮಹಾರಾಣಿಯವರು ಕಾಂಗ್ರೆಸಿನ ತತ್ವವನ್ನು ಅಂಗೀಕರಿಸಿರುವರು ಎಂಬುದಾಗಿ ಪಂ|| ನೆಹರು ಗ್ವಾಲಿಯರಿನಲ್ಲಿ ತಿಳಿಸಿದರು.

ಕಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಪಶ್ಯಾಮ್ಲ ಜೋಯಿಸರಿಂದ
22 ಶತೀಯು ಉತ್ಪಾ

ಸೀಲ್ ಮುರಿತ

ಲಕ್ನೋ ಕೇಂದ್ರ ಚುನಾವಣಾ ಕ್ಷೇತ್ರದಲ್ಲಿ ಓರ್ವ ಮಹಿಳೆ ಓಟಿಗೆ ಸೀಲನ್ನು ಬಳವಾಗಿ ಒತ್ತಿದಾಗ ಅದು ಮುರಿದುಹೋಯಿತು.

ಓಟು ಮಾರಬೇಡಿ

ಹಣಕ್ಕಾಗಿ ನಿಮ್ಮ ಓಟುಗಳನ್ನು ಮಾರಿಕೊಳ್ಳಬೇಡಿ ಎಂದು ಗದಗಿನಲ್ಲಿ ಶ್ರೀಮತಿ ಸರೋಜಿನಿ ಮಹಿಷಿ ತಿಳಿಸಿರುವರು.

ಬೆಂಕಿ ಅನಾಹುತ

ನ್ಯಾಮತಿಗೆ 5 ಮೈಲಿಗಳ ದೂರದ ಕ್ಯಾತಸಕೊಪ್ಪದಲ್ಲಿ ಒಂದು ಮಗು ಮತ್ತು ಒಂದು ಗೂಳಿ ಬೆಂಕಿ ಅನಾಹುತದಿಂದ ಸತ್ತಿತು.

ಹೊಸ ಸ್ನೇಹ ಒಪ್ಪಂದ ಆಗಬೇಕೆಂಬ ಚೀನಾ ಸಲಹೆ ಬಗ್ಗೆ ಯಾವ ಪ್ರಗತಿ ಆಗಿಲ್ಲವೆಂದು ಡೆಹಲಿ ವಂದಿ

ಮಧುರಾದಲ್ಲಿ ಮೊನ್ನೆ ರಾಜಾಜಿ ಮಾತನಾಡುತ್ತಾ, ಭಾರತದ ಅಧ್ಯಂತ ಶ್ರೀ ಇ ವಿ ರಾಮಸ್ವಾಮಿ ನಾಯ್ಕರನ್ನು ಕಂಡರೆ ಆಗದಿರುವಾಗ, ತಮಿಳು ನಾಡಿನಲ್ಲಿ ಅವರ ಮಾತು ಕಾಂಗ್ರೆಸಿಗರಿಗೆ ದೇವವಾಣಿಯಾಗಿರುವದು ಆಶ್ಚರ್ಯ ಎಂದರು

ಈ 40 ಸಾವಿರ ಬೆಲೆಯ 320ತೊಲ ಅಕ್ರಮ ಸಾಗಾಣಿಕೆ ಭಂಗಾರ ಕಲ್ಕತ್ತ ಡಂ ಡಂ ವಿಮಾನದಲ್ಲಿ ಸಿಕ್ಕಿತು.

ಅಂಬಾಲಾದ್ರೂರ ಗ್ರಾಮದ ಚಾವಣಿ ಮೊನ್ನೆ ಕುಸಿದು 22 ವಿದ್ಯಾರ್ಥಿಗಳು ಉಪಾಧ್ಯಾಯರು ಗಾಯಗೊಂಡರು

ಬ್ರಾಹ್ಮಣರು ಕಾಮರಾಜ ನಾಡಾರ್ ಕಾಂಗ್ರೆಸಿಗೆ ಮತಕೊಡಬೇಕೆಂದು ಶ್ರೀ ರಾಮಸ್ವಾಮಿ ನಾಯ್ಕರು ಮದರಾಸಿನಲ್ಲಿ ತಿಳಿಸಿದ್ದಾರೆ.

ಸತ್ತವರ ಸಂಖ್ಯೆ

ಹ್ಯಾಂಬರ್ಗ್ ಸೆನೇಟಿನ ಪ್ರಮುಖರೋರ್ವರು ಹ್ಯಾಂಬರ್ಗಿನಲ್ಲಿ ಮೊನ್ನೆ ಹೇಳಿಕೆಯನ್ನಿತ್ತು, ಹ್ಯಾಂಬರ್ಗಿನಲ್ಲಿ ಆದ ಪ್ರವಾಹದ ದೆಸೆಯಿಂದ 226 ಮಂದಿ ಮರಣ ಹೊಂದಿರುವರು ಎಂದು ತಿಳಿಸಿರುವರು.

ಎಂಟು ಹೆಂಗಸರ ಕೊಲೆ

ಕಲ್ಕತ್ತಾದಿಂದ ಬಂದಿರುವ ವಾರ್ತೆಯ ಪ್ರಕಾರ ಒರ್ವ ಹಠಾತ್ತನೆ ಹುಚ್ಚು ಆದ ಮನುಷ್ಯನು ಮೂರು ಗರ್ಭಿಣಿಗಳಿಗೆ ಪ್ರವೇಶಿಸಿ 8 ಮಹಿಳೆಯರನ್ನು ಕೊಡಲಿಯಿಂದ ಹೊಡೆದು ಕೊಂದನು. ಅವನನ್ನು ಬಂಧಿಸಲು ಪೋಲೀಸರು ವಿಶೇಷದಳ ಹೋಗಲು, ಅವನು ಕಾಡಿಗೆ ಓಡಿದನು.

ಬಂಧನ

ಕಳೆದ ಹನ್ನೆರಡು ವರ್ಷಗಳಿಂದ ಬೊಂಬಾಯಿನಲ್ಲಿ ಬರ್ಮಾ ಮೆಲ್ ನೌಕರರು ಮುಷ್ಕರ ಹೂಡಿರುವರು. ಸೋಮವಾರ 112 ಜನರನ್ನು ಪೋಲೀಸರು ಬಂಧಿಸಿದರು.

ಸಮರ್ಥನೆ

ಕಮ್ಯೂನಿಸ್ಟರಿಗಾಗಲಿ ಅಥವಾ ಕಮ್ಯೂನಿಸ್ಟು ಬೆಂಬಲ ಪಡೆದ ಸ್ವತಂತ್ರರಿಗಾಗಲಿ ಓಟು ಕೊಡದಿರುವಂತೆ ಕ್ಯಾಥೋಲಿಕರಿಗೆ ಬಿಷಪ್ಪರು ಕರೆಯನ್ನು ಕೊಟ್ಟಿರುವ ಒಗ್ಗೆ ಅಖಿಲ ಕೇರಳ ಕ್ಯಾಥೋಲಿಕ್ ಕಾಂಗ್ರೆಸಿನ ಕಾರ್ಯಕಾರಿ ಸಮಿತಿ ನಿರ್ಣಯ ಸಮರ್ಥಿಸಿದೆ

ಡಿಗಾಲೆ ಪರತ್ತು

ಅಣು ನಿಶ್ಯಸ್ತ್ರೀಕರಣದ ಬಗ್ಗೆ ಸಂಧಾನಕ್ಕೆ ತಾವು ಸಿದ್ಧರಾಗಿರುವದಾಗಿ ಫ್ರಾನ್ಸಿನ ಅಧ್ಯಕ್ಷ ಡಿಗಾಲೆ ಪ್ರಧಾನಿ ಕೃಶ್ಚೇವ್‌ರಿಗೆ ತಿಳಿಸಿರುವರೆಂದು ಪ್ಯಾರಿಸ್ಸಿನಿಂದ ವಾರ್ತೆ ಬಂದಿದೆ ಅಣು ಅಸ್ತ್ರಗಳನ್ನು ಹೊಂದಿರುವದನ್ನು ಮತ್ತು ಪ್ರಥ್ವಿಯಲ್ಲೇ ಹೊಂದಿರುವವನ್ನು ಈ ಸಮ್ಮೇಳನಕ್ಕೆ ಆಹ್ವಾನಿಸಬೇಕು ಎಂದು ಅವರು ನುಡಿದಿರುವರು.

ಒಪ್ಪಂದ

ಫ್ರಾನ್ಸ್ ವಶ್ತು ಅಲ್ಜೀರಿಯಾಗಳಲ್ಲಿ ನಡೆಯುತ್ತಿದ್ದ ಶಾಂತಿ ಮಾತುಕತೆಗಳು ಒಪ್ಪಂದದಲ್ಲಿ ಬಗೆಹರಿದಿವೆ ಎಂದು ಪ್ಯಾರಿಸ್ಸಿನ ವಾರ್ತೆ.

★

ಮಾಜಿ ವಿದೇಶಾಂಗ ಮಂತ್ರಿಯನ್ನೊಳಗೊಂಡ 7 ಮಂದಿ ರಾಜಕೀಯ ಬಂದಿಗಳನ್ನು ನೇಪಾಳ ಸರ್ಕಾರ ಬಿಟ್ಟಿದೆ.

ಲೋಕಸಭೆ ಚುನಾವಣೆಗೆ ಮೈಸೂರು ಜಿಲ್ಲ ಕ್ಷೇತ್ರದಿಂದ ಸ್ವತಂತ್ರ ಪಕ್ಷದಿಂದ ಸ್ಪರ್ಧಿಸಿರುವ ನಕ್ಷತ್ರ ಗುರುತನ್ನು ಳ

ಹೆಚ್. ರಾಮರಾಜ ಅರಸ್

ಇವರಿಗೆ ನಿಮ್ಮ ಪವಿತ್ರವಾದ ಓಟುಕೊಡಬೇಕಾಗಿ ವಿನಂತಿ

SHAKTI SUDHA

A Superb Tonic

ವುಡ್‌ಲಾಂಡ್ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶನವಾಗುತ್ತಿರುವ ಅಮೋಘ 2 ನೇ ವಾರ

.... 30,000 ಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸಿರುವರು ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್
ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೇರಾ — 18-2-62 ರಿಂದ

ನದಾರಮೆ (ಕನ್ನಡ)

ತಾರಾಗಣ— ಜಿ ಹೆಚ್ ಎಣ್ಣಪ್ಪ, ಸಾಹುಕಾರ್ ಜಾನಕಿ, ಕಲ್ಯಾಣಕುಮಾರ್
ರಾಜಾ ಸುಲೋಚನ, ಪದ್ಮಿನಿ ಪ್ರಿಯದರ್ಶಿನಿ [ದಿನವಹಿ 3 ಆಟಗಳು]

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರದ ಮುಂದೆ

ನಕ್ಷತ್ರ X ಹೀಗೆ ಸೀಲ್ ಹಾಕಿ



— — Weather Robot — —

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.